ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್‌ರವರ ಕೋರ್ಟಿನಲ್ಲಿ—

ಸ್ರ 1884ನೇ ಇಸವಿ ಅರ್ಜೀ ನಂಬರ್ 121.

ಮೃತಪಟ್ಟ ನರಹಿಪ್ಪಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಮದ್ದಗಿರಿ ತಾ॥ ಕೊಡಗೇಹಳ್ಳಿ ಹೋಬಳಿ ಕೇಕದಾರ್ ಹಂಚನಾಳು ಸುಬ್ಬಂಣನು, ಮೃತಪಟ್ಟ ಸದರೀ ನರಹಿಪ್ಪಯ್ಯನವರಿಗೆ ಅವಿಭಕ್ತ ಸಹೋದರನಾಗಬೇಕೆಂಬ ಹಕ್ಕುದಾರಿ ಮೇಲೆ ಕೊಡಗೇಹಳ್ಳಿ ಸ್ಥಳದ ಕೇಕದಾರ ಸುಬ್ಬಂಣನವರು ಹಂಚನಾಳು ವಾಸಸ್ಥರಾಗಿ ಮೃತಪಟ್ಟ ನರಹಿಪ್ಪಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಂಣನವರ ಅರ್ಜೀಯನ್ನು 1884ನೇ ಇಸವಿ ಆಗಸ್ಟ್ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಹಿಪ್ಪಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 124.

ಮೃತಪಟ್ಟ ಹುಚ್ಚಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಸ್ಥಳದ ಕೆಂಪಂಣನು ಮೃತಪಟ್ಟ ಸದರೀ ಹುಚ್ಚಯ್ಯನವರಿಗೆ ಅವಿಭಕ್ತ ದೊಡ್ಡಪ್ಪನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಕೆಂಪಂಣನು ಡಿಟೋ ವಾಸಸ್ಥರಾಗಿ ಮೃತಪಟ್ಟ ಹುಚ್ಚಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಂಣನವರ ಅರ್ಜೀಯನ್ನು 1884ನೇ ಇಸವಿ ಆಗಸ್ಟ್ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಚ್ಚಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟ್ ವ್ಯೆಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ ಜಡ್ಜ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ

1884ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಪಟೇಲ್ ಬಟ್ಟೇಗವ್ಡನ ಆಸ್ತಿ ವಿಷಯದಲ್ಲಿ—

ಡಿಟೋಯವನ ಮಗ ಬೆಟ್ಟು ಮೈನರ್, ಗಾರ್ಡಿಯರ್ ಇವನ ತಾಯಿ ಅರ್ಜೀದಾರಳಾದ ದ್ಯಾವಮ್ಮ, ಮೃತಪಟ್ಟ ಸದರೀ ಪಟೇಲ್ ಬಟ್ಟೇಗವ್ಡನಿಗೆ ಹೆಂಡತಿ ಮತ್ತು ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣದ ತಾ॥ ಕ್ಯಾತನಹಳ್ಳಿ ಹೋಬಳಿ ಮಂಚನಹಳ್ಳಿ ಗ್ರಾಮದ ಸ್ಥಳದ ಬೆಟ್ಟು ಮೈನರ್, ಗಾರ್ಡಿಯರ್ ದ್ಯಾವಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಬೆಟ್ಟೇಗವ್ಡನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾಳೆ.

ಸದರೀ ದರಖಾಸ್ತುದಾರರಾದ ಬೆಟ್ಟು ಮೈನರ್, ಗಾರ್ಡಿಯರ್ ದ್ಯಾವಮ್ಮ ಇವರ ಅರ್ಜಿಯನ್ನು 1884ನೇ ಆಗಸ್ಟ್ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬಟ್ಟೇಗವ್ಡನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1884ನೇ ಇಸವಿ ಅರ್ಜೀ ನಂಬರ 266.

ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಡಿಟೋಯವನ ಮಗನಾದ ವೆಂಕಟಸಾಮಿ, ಮೃತಪಟ್ಟ ಸದರೀ ಕುಂಬಾರ ಚಿಂತಿ ರಾಮಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳಿ ಸ್ಥಳದ ವೆಂಕಟಸಾಮಯ್ಯ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟಸಾಮಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ 296.

ಮೃತಪಟ್ಟ ಶಿವಾಚಾರದ ಮಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜಿದಾರಳಾದ ಡಿಟೋಯವನ ಹೆಂಡತಿ ಬಸವ್ಮನು, ಮೃತಪಟ್ಟ ಸದರೀ ಮಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಂಡ್ಲು ತಾ॥ ತೆರಕಣಾಂಬಿ ಹೋಬಳಿ ಬೊಮ್ಮನಹಳ್ಳಿ ಸ್ಥಳದ ಬಸವ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಮಾರಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಸವ್ಮನ ಅರ್ಜೀಯನ್ನು 1884ನೇ ಇಸವಿ ಆಕ್ಟೋಬರ್ ತಿಂಗಳು ತಾರೀಖು 21ರಲ್ಲು ಮೈಸೂರು ಮೊಕ್ಕಾಂ ಈಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಮಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಂಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ನಂ. 6. ತಾರೀಖು 4ನೇ ಆಗಸ್ಟು 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇನರಸೀಪುರದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲೀ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೇ ಯಾಗಲೀ ಈ ನೋಟೀಸು ತಾರೀಖು ಲಗಾಯತು ಎಂದು ತಿಂಗಳ ಪಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಟ ಆಕ್ಟು 85ನೇ ಸೆಕ್ಷ್ಟ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೋಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
39. 1881—82	ನರಸೀಪುರದ ತಾಲ್ಲೂಕು ಸೂರನಹಳ್ಳಿ ಗ್ರಾಮವಲ್ಲಿರುವ ಸ್ಮಾರ್ತ ಬ್ರಾಹ್ಮಣ ಕೇಶವಯ್ಯನ ಹೆಂಡತಿ ಜೀವಾಯಿತು ಜೀವನದರ ನರಸಮ್ಮ	ಲೇಟ್ ಅರಕಲ್‌ಗೂಡು ತಾಲ್ಲೂಕು ಗುಬ್ಬಿ ವಾಸಸ್ಥ ಸ್ಮಾರ್ತ ಬ್ರಾಹ್ಮಣ ಗೋಣಿಬೀಡು ಸುಬ್ಬಾಭಟ್ಟರ ಮಗ ವೈದೀಕ ವೃತ್ತಿ ಜೀವನದ ನಂಜಪ್ಪ.	27—7—82	27—7—82	1,183—0—10ರೂಪಾಯಿನ ಜಮ್ಮಿ ಕ್ರಯಪತ್ರ.